ಕ್ರ. ಸಂ.	ಜಿಲ್ಲೆಯ ಹೆಸರು	ಸಮಾಜ ಕಲ್ಯಾಣ ಇಲಾಖೆ	ಹಿಂದುಳಿದ ವರ್ಗಗಳ ಇಲಾಖೆ	ಪರಿಶಿಷ್ಟ ವರ್ಗಗಳ ಇಲಾಖೆ	ಅಲ್ಪಸಂಖ್ಯಾತರ ಇಲಾಖೆ
4.	ಚಿಕ್ಕೋಡಿ	16	7	-	-
5.	ಗೋಕಾಕ್	25	9	-	-
6.	ಹುಕ್ಕೇರಿ	20	7	3	-
7.	ಖಾನಾಪುರ	4	1	-	-
8.	ರಾಯಬಾಗ್	6	6	-	-
9.	ರಾಮದುರ್ಗ	8	6	-	-
10.	ಸೌದತ್ತಿ	13	12	-	-
	ಒಟ್ಟು	**141**	**79**	**13**	**13**

ಹುಬ್ಬಳ್ಳಿ ಮಹದೇವ ಟೆಕ್ಸ್‌ಟೈಲ್ ಮಿಲ್ ಬಗ್ಗೆ

4762 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹದೇವ ಟೆಕ್ಸ್‌ಟೈಲ್ ಮಿಲ್ ಬಹಳ ದಿನಗಳಿಂದ ಕೆಲಸ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಮಿಲ್ಲಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರ ಸಂಖ್ಯೆ ಎಷ್ಟು?*

ಇ) *ಈ ಮಿಲ್ಲು ಕೆಲಸ ನಿರ್ವಹಿಸದೆ ಇರುವುದರಿಂದ ಬಡ ಕುಟುಂಬಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಈ ಮಿಲ್ಲನ್ನು ಪುನಃ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಹಾಗೂ ಈ ಮಿಲ್ಲನ್ನು ಪುನಃ ಪ್ರಾರಂಭಿಸಲು ಸರ್ಕಾರಕ್ಕೆ ಎಷ್ಟು ಖರ್ಚು ತಗಲುವುದು?*

ಉ) *ಈ ಮಿಲ್ಲನ್ನು ಹೊಸ ಪದ್ಧತಿ ಪ್ರಕಾರ ಆಧುನೀಕರಿಸಿ, ಲಾಭದಾಯಕವನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ?*

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಗಮನಕ್ಕೆ ಬಂದಿದೆ.

ಆ) 425

ಇ) ಗಮನಕ್ಕೆ ಬಂದಿದೆ.

ಈ) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ :5.11.1995ರ ಮೇರೆಗೆ ಸದರಿ ಮಿಲ್ಲನ್ನು ಸಮಾಪನಗೊಳಿಸಲಾಗಿದೆ. ಆದುದರಿಂದ ಈ ಮಿಲ್ಲನ್ನು ಪುನಃ ಪ್ರಾರಂಭಿಸುವ ಪ್ರಸ್ತಾವ ಇರುವುದಿಲ್ಲ.

ಉ) ಇಲ್ಲ.

ಬೈಲಹೊಂಗಲ ನಗರಸಭೆಗೆ ಜನರೇಟರ್ ಖರೀದಿಸಲು ಅನುದಾನ

4763 - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಮೇಲಿಂದ ಮೇಲೆ ವಿದ್ಯುತ್ ಸರಬರಾಜಿನ ತೊಂದರೆಯಿಂದಾಗಿ ಕುಡಿಯುವ ನೀರಿನ ಸಮಸ್ಯೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಆ) *ಬೈಲಹೊಂಗಲ ನಗರದ ಹೊಸ ಬಡಾವಣೆಗಳಲ್ಲಿ ಕೊಳವೆ ಬಾವಿಗಳು ಹಾಗೂ ನೀರಿನ ಸೌಕರ್ಯವಿಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?*

ಇ) *ಸ್ಥಳೀಯ ಶಾಸಕರು ಪುರಸಭೆಯವರು ಸ್ಕೇರ್‌ಸಿಟಿಯಲ್ಲಿ ಜನರೇಟರ್ ಖರೀದಿಸಲು 22 ಲಕ್ಷ ರೂ. ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳು ಬೆಳಗಾಂವ ಇವರಿಗೆ ಹಲವಾರು ಮನವಿ ಮಾಡಿದರೂ ಸಹ ಹಣ ಬಿಡುಗಡೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?*

ಈ) *ಬೈಲಹೊಂಗಲ ನಗರದ ನಗರಸಭೆಯ ಆರ್ಥಿಕ ಪರಿಸ್ಥಿತಿಯು ಜನರೇಟರ್ ಖರೀದಿಸುವಷ್ಟು ಸುಸ್ಥಿತಿಯಲ್ಲಿ ಇರದೇ ಇರುವುದರಿಂದ ಸರ್ಕಾರ ಯಾವುದಾದರೂ ವಿಶೇಷ ಅನುದಾನವನ್ನಾಗಲಿ ಅಥವಾ ಸ್ಕೇರ್‌ಸಿಟಿಯಲ್ಲಾಗಲಿ 22 ಲಕ್ಷ ರೂ. ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದೇ ?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಬಂದಿದೆ.

ಇ) ಇಲ್ಲ.

ಈ) ನಗರಸಭೆಯಿಂದ ಈ ಬಗ್ಗೆ ಲಿಖಿತ ಮನವಿ ಬಂದಿಲ್ಲ ಪರಿಶೀಲಿಸಲಾಗುವುದು.